# ತಂದೆಯೊಳಗೊಬ್ಬ ಶಿಕ್ಷಕ, ಮಗಳ ಕಣ್ಣಿಗೆ ಆಗಂತುಕ

ಗೆಳತಿ: ನನ್ನ ಮಲತಾಯಿ ಕಚೇರಿಯಿಂದ ಮನೆಗೆ ಬರುತ್ತಲೇ ನನ್ನ ಮತ್ತು ನನ್ನ ಅಣ್ಣನ ಮೇಲೆ ಹರಿಹಾಯುತ್ತಾಳೆ.

ಜೊಹಾನಾ: ಏಕೆ?

ಗೆಳತಿ: ಗೊತ್ತಿಲ್ಲ. ಅವಳು ನಮ್ಮನ್ನು ದ್ವೇಷಿಸುತ್ತಾಳೆ. ಅವಳು ನಮಗೆ ಸ್ವಲ್ಪವೂ ಇಷ್ಟವಾಗಲ್ಲ.

ಜೊಹಾನಾ: ನನಗೂ ನನ್ನ ಮಲತಂದೆ ಇಷ್ಟವಾಗಲ್ಲ. ಅವನು ತುಂಬಾ ಸ್ವಾರ್ಥಿ. ನನ್ನ ದೋಷಗಳನ್ನು ಹುಡುಕುತ್ತಿರುತ್ತಾನೆ. ನನಗೆ ನೇರವಾಗಿ ಏನೂ ಹೇಳಲ್ಲ. ಆದರೆ ನನ್ನ ಬೆನ್ನ ಹಿಂದೆ ನನ್ನ ತಾಯಿಗೆ ದೂರು ಹೇಳ್ತಾನೆ.

ಗೆಳತಿಯ ಸಲಹೆ: ಒಂದು ವೇಳೆ ಮಲತಂದೆ ಇಷ್ಟವಾಗದಿದ್ದರೆ, ನಿನ್ನ ಡ್ಯಾಡಿಯ ಬಳಿ ಇರಲು ಹೋಗು.

ಜೊಹಾನಾ: ಹೇಗೆ ಹೋಗಲಿ? ನಾನು ನಿರ್ಧರಿಸಲು ಸಾಧ್ಯವಿಲ್ಲ. ಅಲ್ಲದೆ ನಾನೆಂದೂ ನನ್ನ ಡ್ಯಾಡಿಯ ಜೊತೆಯಲ್ಲಿ ಇರಲಿಲ್ಲ. ಅವರದೇ ಆದ ಒಂದು ಪರಿವಾರವಿದೆ... ಆದರೆ ನಾನು ಅವರಿಗೆ ಫೋನ್ ಮಾಡ್ತಾ ಇರ್ತೀನಿ. ಫೇಸ್ ಟೈಮ್ ಮತ್ತು ಸ್ಕೈಪ್‌ನಲ್ಲೂ ಮಾತಾಡ್ತಿರ್ತೀನಿ.

ನನಗೆ ಆಶ್ಚರ್ಯವಾಯಿತು. ಜೊಹಾನಾ ನನ್ನ ಬಗ್ಗೆ ಹೀಗೆಲ್ಲಾ ಬರೆಯುತ್ತಿದ್ದಾಳೆ.

ನಾನು ಜೊಹಾನಾಳನ್ನು ನನ್ನ ಮಗಳಂತೆ ಪ್ರೀತಿಸುತ್ತೇನೆ. ಜನ ನನ್ನನ್ನು ನಿಮಗೆಷ್ಟು ಮಕ್ಕಳು ಎಂದು ಕೇಳಿದಾಗ, ನನಗೆ ನಾಲ್ಕು ಮಕ್ಕಳೆಂದು ಹೇಳುತ್ತೇನೆ. ನನ್ನ ಶಾಲೆಯಲ್ಲಿ ಎಲ್ಲರಿಗೂ ನನಗೆ ನಾಲ್ಕು ಜನ ಹೆಣ್ಣು ಮಕ್ಕಳಿದ್ದಾರೆಂದು ಹೇಳಿದ್ದೇನೆ. ಹೌದು, ಅವರ ತಪ್ಪು ಆಚರಣೆಯಿಂದ ಅವರನ್ನು ತಡೆಯುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ. ಮಕ್ಕಳಿಗೆ ಸ್ವಾತಂತ್ರ್ಯ ಕೊಡುವುದಕ್ಕೆ ಮೊದಲು ಅವರಿಗೆ ಸರಿಯಾದ ಮಾರ್ಗದರ್ಶನ ಕೊಡುವುದು ಮುಖ್ಯ; ಅವರು ಯೋಗ್ಯ ಮಾರ್ಗದಲ್ಲಿ ಸಾಗಲಿ ಎಂಬುದು ಇದರ ಹಿಂದಿನ ಉದ್ದೇಶವಾಗಿರುತ್ತದೆ. ನಾನು ಜೊಹಾನಾಳ ಅಭಿಪ್ರಾಯಗಳ ಬಗ್ಗೆ ಮನನ ಮಾಡಿದೆ. ಇನ್ನೊಂದು ಮಗ್ಗುಲಿನಿಂದ ಯೋಚಿಸಿದೆ. ಬಹುಶಃ ಜೊಹಾನಾ ಹೇಳುವುದು ಉಚಿತವಾಗಿದೆ, ನಾನು ಅವಳ ಬೆನ್ನ ಹಿಂದೆ ನೀನಾಳಿಗೆ ದೂರು ಹೇಳುವುದಕ್ಕೆ ಬದಲು ಅವಳೊಂದಿಗೆ ನೇರವಾಗಿ ಮಾತನಾಡಬೇಕು. ಒಂದು ವೇಳೆ ನಾನು ಕರೀನಾ ಮತ್ತು ಜೊಹಾನಾಳನ್ನು ನನ್ನ ಮಕ್ಕಳೆಂದು ತಿಳಿಯುವುದಾದರೆ, ಅವರೊಂದಿಗೆ ನೇರವಾಗಿ ಮಾತನಾಡಬೇಕು. ಅವರ ತಾಯಿಯ ಮೂಲಕ ಅಲ್ಲ ಎಂದು ಯೋಚಿಸಿದೆ.

ಜೊಹಾನಾಳ ಮಾತು ನನಗೆ ಅಪ್ರಿಯವೆನಿಸಿದಾಗ, ನೀನಾಗೆ ಹೇಳುವುದಕ್ಕೆ ಬದಲು ನೇರವಾಗಿ ಅವಳಿಗೇ ಹೇಳಲಾರಂಭಿಸಿದೆ. ಆದರೆ ಇದರಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. ಅಂದು ಜೊಹಾನಾ ತುಂಬಾ ತಡವಾಗಿ ಮನೆಗೆ ಬಂದಿದ್ದಳು. ನೀನಾ ಮಲಗಲು ಹೋಗಿದ್ದಳು. ನಾನು ಲಿವಿಂಗ್ ರೂಮಿನಲ್ಲಿ ಕೂತು ಅವಳು ಮನೆಗೆ ಬರುವುದನ್ನೇ ಕಾಯುತ್ತಿದ್ದೆ. 'ನೀನೆಲ್ಲಿದ್ದೀಯ, ನಿನ್ನನ್ನು ಕರೆತರಲು ಬರಲೇ?' ಎಂದು ಅವಳಿಗೆ ಅನೇಕ ಬಾರಿ ಫೋನ್ ಸಹ ಮಾಡಿದ್ದೆ. ಆದರೆ ಫೋನ್ ಕಟ್ ಆಗುತ್ತಿತ್ತು. ಇಂದಿನ ಮಕ್ಕಳಿಗೆ ಏನಾಗಿದೆ? ನಡುರಾತ್ರಿಯಾದರೂ, ತಾವೆಲ್ಲಿದ್ದೇವೆಂದು ಹೇಳುವುದೂ ಇಲ್ಲ.

ಜೊಹಾನಾ ರಾತ್ರಿ ಹನ್ನೆರಡು ಗಂಟೆಯ ನಂತರ ಮನೆಗೆ ಬಂದಳು. ನಾನು ಲಿವಿಂಗ್ ರೂಮಿನಲ್ಲಿ ಕೂತಿರುವುದನ್ನು ನೋಡಿ ಒಮ್ಮೆಲೆ ನಿಂತು ಕೇಳಿದಳು, 'ನೀವಿನ್ನೂ ಮಲಗಿಲ್ಲವೇ?'

'ನಿನ್ನನ್ನು ಕಾಯ್ತಿದ್ದೇನೆ. ಐದು ಬಾರಿ ಫೋನ್ ಸಹ ಮಾಡಿದೆ, ಆದರೆ ಫೋನ್...'

'ಓಹ್, ನನ್ನ ಮೊಬೈಲಿನ ಬ್ಯಾಟರಿಯಲ್ಲಿ ಚಾರ್ಜ್ ಇರಲಿಲ್ಲ. ನೀವು ನನ್ನನ್ನು ಕಾಯುವ ಅವಶ್ಯಕತೆ ಇಲ್ಲ. ನಾನು ಮಮ್ಮಿಗೆ, ನಾನೆಲ್ಲಿಗೆ ಹೋಗ್ತಿದ್ದೇನೆ, ಯಾವಾಗ ಬರ್ತೀನಿ ಅಂತ ಹೇಳಿ ಹೋಗಿದ್ದೆ.'

ಅವಳು ಹೇಳಿದ ಧಾಟಿ ನೋಡಿ ನನಗೆ ಬೇಸರವಾಯಿತು, ಆದರೂ ಮೌನವಹಿಸಿದೆ. ಅವಳು ಕೂಡಲೇ ಮೆಟ್ಟಿಲುಗಳನ್ನು ಹತ್ತಿ ತನ್ನ ಕೋಣೆಗೆ ಹೋದಳು.

ನನಗೆ ಅವಳ ವರ್ತನೆ, ನಡೆನುಡಿ ಕೆಡುಕೆನಿಸುತ್ತಿತ್ತು. ಈ ಹುಡುಗಿ ತಪ್ಪು ಹಾದಿಯಲ್ಲಿ ಸಾಗುತ್ತಿಲ್ಲ ತಾನೇ? ನನಗೆ ಚಿಂತೆ ಕಾಡಿತು. ಅವಳು ಇಂದು ಯಾವ ಪರಿಸ್ಥಿತಿಯಲ್ಲಿ ಮನೆಗೆ ಬಂದಿದ್ದಳೋ ಅದನ್ನು ಗಮನಿಸಿದಾಗ, ಅವಳು ತಪ್ಪು ಸ್ಥಳದಿಂದ ಹಾದು ಬಂದಿದ್ದಾಳೆ ಎಂಬ ಅನುಮಾನ ನನ್ನನ್ನು ಕಾಡಿತು.

ನಾನು ಒಂದೇ ಸಮನೆ ಅವಳ ಕೋಣೆಯೆಡೆಗೆ ನೋಡುತ್ತಿದ್ದೆ, ಅವಳ ಕೋಣೆಯ ದೀಪ ನಿರಂತರವಾಗಿ ಉರಿಯುತ್ತಿತ್ತು. ಜೊಹಾನಾ ತನ್ನ ಕೋಣೆಗೆ ಹೋಗಿ, ಬಟ್ಟೆ ಬದಲಾಯಿಸಿ ಮಲಗುತ್ತಾಳೆಂದು ಯೋಚಿಸಿದ್ದೆ. ಆದರೆ ಅವಳ ಕೋಣೆಯಲ್ಲಿ ಉರಿಯುತ್ತಿದ್ದ ದೀಪವನ್ನು ನೋಡಿ, ಅವಳಿನ್ನೂ ಮಲಗಿಲ್ಲವೆಂದು ತೋರುತ್ತಿತ್ತು. ಅವಳೇಕೆ ನಿದ್ರಿಸುತ್ತಿಲ್ಲ? ಇನ್ನೂ ದೀಪ ಹೊತ್ತಿಸಿ ಏನು ಮಾಡುತ್ತಿದ್ದಾಳೆ? ರಾತ್ರಿಯ ಒಂದು ಗಂಟೆಯಾಗಿದೆ. ನಾಳೆ ಬೆಳಿಗ್ಗೆ ಅವಳು ಶಾಲೆಗೂ ಹೋಗಬೇಕು. ಅವಳ ಶಾಲೆಯಿಂದ, ಅವಳು ಮೊದಲ ಪಿರಿಯಡ್‌ನಲ್ಲಿಯೇ ತರಗತಿಯಲ್ಲಿ ನಿದ್ರಿಸುತ್ತಾಳೆ ಎಂದು ದೂರು ಸಹ ಬಂದಿದೆ.

ನಾನು ಯೋಚಿಸುತ್ತಾ ಅವಳ ಕೋಣೆಯವರೆಗೆ ಹೋದೆ. ಮೆಲ್ಲನೆ ಬಾಗಿಲನ್ನು ತೆರೆದು ಇಣುಕಿದೆ. ಅವಳು ಹಾಸಿಗೆಯಲ್ಲಿ ಅರ್ಧ ಮಲಗಿ ಯಾರೊಂದಿಗೋ ಮೊಬೈಲಿನಲ್ಲಿ

